# ಕಾಮರೂಪದ ಕೂರ್ಮಕೊಳ

**ಅಸ್ಸಾಮಿನ ನಾಗಶಂಕರ ದೇಗುಲಕ್ಕೆ ಹೊಂದಿಕೊಂಡಂತಿರುವ ವಿಶಾಲವಾದ ಕೊಳ ತನ್ನೊಡಲಿನಲ್ಲಿರುವ ಸಾವಿರಾರು ಆಮೆಗಳ ಕಾರಣದಿಂದ ಪ್ರಸಿದ್ಧ. ನೂರಾರು ವರ್ಷಗಳಿಂದ ಆಮೆಗಳ ತಾಣವಾಗಿರುವ ಈ ಪರಿಸರ, ಅಪರೂಪದ ಕೂರ್ಮ ಪ್ರಭೇದಗಳ ಸಂರಕ್ಷಣಾ ಕೇಂದ್ರವೂ ಹೌದು.**

**■ ಆನಂದತೀರ್ಥ ಪ್ಯಾಟಿ**



ಕಣ್ಣಿಗೆ ಕಂಡಷ್ಟೂ ಖಾಲಿ ಗದ್ದೆಗಳೇ. ರಸ್ತೆಯ ಎರಡೂ ಬದಿಗಳಲ್ಲಿ ಗಗನಚುಂಬಿಸುವ ಮರಗಳು. ಅಂಕುಡೊಂಕಾದ ನುಣುಪು ರಸ್ತೆಯಲ್ಲಿ ಸಾಗುತ್ತಿದ್ದ ವಾಹನವನ್ನು ನಿಧಾನಗೊಳಿಸಿದ ನಮ್ಮ ಸಾರಥಿ ದೇಬ್, ಕ್ರಾಸ್‌ನಲ್ಲಿ ಹೊರಳಿ ದೇವಸ್ಥಾನವೊಂದರ ಮುಂದೆ ನಿಲ್ಲಿಸಿದ. ಅಲ್ಲಿದ್ದ ಪ್ರವಾಸಿಗರೋ ಅಥವಾ ಭಕ್ತರೋ, ನಾಲ್ಕೈದು ವಾಹನಗಳಲ್ಲಿ ಅಲ್ಲಿಂದ ಹೊರಡಲು ಸಿದ್ಧತೆ ನಡೆಸಿದ್ದರು. 'ಇಲ್ಲಿ ನಿಮಗೊಂದು ಅಚ್ಚರಿ ಸಿಗಲಿದೆ' ಎಂದ ದೇಬ್, ದೇಗುಲದ ಹೊರದ್ವಾರದ ಬಳಿ ಹೋದ. ನಾವು ಒಳ ಪ್ರವೇಶಿಸಿದೆವು. ಮೇಲ್ನೋಟಕ್ಕೆ ಅದು ಪುರಾತನ ದೇಗುಲದಂತೆ ಕಾಣುತ್ತಿತ್ತು. ಬೃಹತ್ ಮೂರ್ತಿಗಳು, ಎದೆ ಢವಗುಟ್ಟುವಂತೆ ಸದ್ದು ಹೊರಡಿಸುವ ನೂರು ವರ್ಷದ ಡೋಲು ಹಾಗೂ ಗರ್ಭಗೃಹದಲ್ಲಿ ಶಿವನ ಗಂಭೀರ ವಿಗ್ರಹ.

ಅಸ್ಸಾಮಿನ ಸಾಮಾನ್ಯ ದೇಗುಲಗಳಂತೆಯೇ ಅದು ಕೂಡ. ಒಳಗೊಂದು ಸುತ್ತು ಹಾಕಿ ಹೊರಬಂದಾಗ, ಕೈಯಲ್ಲಿ ಒಣಮೀನಿನ ಪುಡಿ ಪಾಕೆಟ್‌ಗಳೊಂದಿಗೆ ದೇಬ್ ನಿಂತಿದ್ದ; 'ದೇವಸ್ಥಾನದ ಹಿಂದೆ ಬನ್ನಿ' ಎಂದು ಕರೆದೊಯ್ದ. ಹತ್ತೇ ಹೆಜ್ಜೆಗಳ ಅಂತರದಲ್ಲಿ ವಿಶಾಲವಾದ ಕೊಳ ಕಾಣಿಸಿತು. ದಿಟ್ಟಿಸಿ ನೋಡಿದಾಗ ದಂಡೆಯಲ್ಲಿ ಬಿಸಿಲು ಕಾಯಿಸುತ್ತ ನಿಶ್ಚಲ ಸ್ಥಿತಿಯಲ್ಲಿ ಕೂತಿದ್ದ ಬೃಹತ್ ಗಾತ್ರದ ಆಮೆಗಳು ಗೋಚರಿಸಿದವು. ಅಚ್ಚರಿಯಿಂದ ನೋಡಿದಾಗ, ಇನ್ನಷ್ಟು ಕೆಳಗೆ ಬರಲು ದೇಬ್ ಸೂಚಿಸಿದ.

ಅಲ್ಲಿ ಮತ್ತೆ ಹತ್ತಾರು ಆಮೆಗಳು! ಹತ್ತಿರ ಹೋದರೂ ಅವೇನೂ ನೀರಿನೊಳಗೆ ಹೋಗಲಿಲ್ಲ; ಬದಲಾಗಿ ನಮ್ಮ ಹತ್ತಿರಕ್ಕೇ ಚಲಿಸತೊಡಗಿದವು. ಪ್ಲಾಸ್ಟಿಕ್ ಚೀಲ ತೆರೆದ ದೇಬ್, ಒಣಮೀನುಗಳನ್ನು ಅವುಗಳತ್ತ ಎಸೆದ. ಎಲ್ಲಿದ್ದವೋ ಮತ್ತೊಂದಷ್ಟು ಆಮೆ; ಒಂದೊಂದೇ ನೀರಿನೊಳಗಿಂದ ಮೇಲಕ್ಕೆ ಬಂದು, ನಮ್ಮತ್ತಲೇ ಸುಳಿದಾಡತೊಡಗಿದವು.

### ಪುರಾಣ-ಪ್ರಾಚೀನ

ಅಸ್ಸಾಮಿನ ನಾಗಶಂಕರ ದೇವಸ್ಥಾನ ಶಿವಭಕ್ತರಿಗೂ ವನ್ಯಜೀವಿ ತಜ್ಞರಿಗೂ ಮೆಚ್ಚಿನ ತಾಣ. ಬ್ರಹ್ಮಪುತ್ರ ನದಿಯ ಉತ್ತರ ದಿಕ್ಕಿಗಿರುವ ಸೋನಿತ್‌ಪುರ ಜಿಲ್ಲೆಯ ಸೂತೇಜಾ ಪಟ್ಟಣಕ್ಕೆ ಸಮೀಪ ಈ ಮಂದಿರವಿದೆ. ಏಕಕಾಲಕ್ಕೆ ಪುರಾತನದಂತೆಯೂ, ಆಧುನಿಕ ಶೈಲಿ ದೇಗುಲದಂತೆಯೂ ಭಾಸವಾಗುವ ಈ ಮಂದಿರಕ್ಕೆ ಒಂದೂವರೆ ಸಾವಿರ ವರ್ಷಗಳ ಇತಿಹಾಸವಿದೆ.

ದಕ್ಷಯಜ್ಞದ ಬಳಿಕ ಶಿವನು ತನ್ನ ಸತಿಯ ದೇಹವನ್ನು ತೆಗೆದುಕೊಂಡು, ಜಗತ್ತು ಸುತ್ತಲು ಹೊರಟ. ಆ ಸಂದರ್ಭದಲ್ಲಿ ಆಕೆಯ ದೇಹದ ಅಂಗಗಳು ಅಲ್ಲಲ್ಲಿ ಬಿದ್ದವು. ಒಂದು ಭಾಗವಾದ ನಾಭಿ ಇಲ್ಲಿ ಬಿದ್ದಿತಂತೆ. ಹೀಗಾಗಿ ಈ ದೇವಸ್ಥಾನದ ಜಾಗಕ್ಕೆ 'ನಾಭಿಶಂಕರ' ಎಂಬ ಹೆಸರು ಬಂತು; ಕ್ರಮೇಣ ನಾವಿಶಂಕರ, ಆಮೇಲೆ ನಾಗಶಂಕರ ಎಂದಾಯಿತು ಎಂಬ ಉಲ್ಲೇಖಗಳನ್ನು ಕೊಡಲಾಗುತ್ತದೆ.

ದೇಗುಲದ ನಿರ್ಮಾಣ ಅವಧಿ ಅಥವಾ ನಿರ್ಮಿಸಿದವರ ಬಗ್ಗೆ ಖಚಿತ ದಾಖಲೆಗಳು ಲಭ್ಯವಿಲ್ಲ. ಅಸ್ಸಾಮಿನ ಪ್ರಾಚೀನ ಹೆಸರು ಕಾಮರೂಪ. ಕ್ರಿ.ಶ. 4ನೇ ಶತಮಾನದಲ್ಲಿದ್ದ ಲೋಹಿತ್ಯಾ ರಾಜಮನೆತನದ ನಾಗಶಂಕರ ಈ ನಾಡನ್ನು ಆಳುತ್ತಿದ್ದ. ಆತ ಈ ದೇವಸ್ಥಾನವನ್ನು ನಿರ್ಮಿಸಿದ ಎನ್ನಲಾಗಿದೆ. ಅಹೋಂ ಸಾಮ್ರಾಜ್ಯದ ಅರಸು ಸು–ಫಾ ಈ ದೇಗುಲವನ್ನು ಕ್ರಿ.ಶ. 1480ರಲ್ಲಿ ದುರಸ್ತಿಪಡಿಸಿ, ಪ್ರಜೆಗಳ ಒಲವು ಗಳಿಸುವ ಪ್ರಯತ್ನ ಮಾಡಿದ. ಅಂದಿನಿಂದ ಕಾಲಕಾಲಕ್ಕೆ ಅರಸು ಮನೆತನಗಳು ಈ ಮಂದಿರವನ್ನು ದುರಸ್ತಿ ಮಾಡಿಸುತ್ತ ಹೋದವು. ದೇವಸ್ಥಾನಕ್ಕೆ ಸಂಬಂಧಿಸಿದಂತೆ ಈಗಲೂ ಕಥೆ–ಕಾವ್ಯ, ಪುರಾಣ ಹಾಗೂ ದಂತಕಥೆಗಳು ಪ್ರಚಲಿತದಲ್ಲಿವೆ. ವರ್ಷಪೂರ್ತಿ ಭಕ್ತರ ಪ್ರವಾಹ ಹರಿದುಬರುವ ದೇವಸ್ಥಾನದಲ್ಲಿ ಶಿವರಾತ್ರಿಯಂದು

